ಈ) ಜಿಲ್ಲೆಯ ಕೇಂದ್ರಸ್ಥಾನದ ಮಂಗಳೂರಿನಲ್ಲಿ ಸಹಾಯಕ ನಿರ್ದೇಶಕರವರ ಕಛೇರಿಯನ್ನು ತೆರೆದು ಬೇಕಾದ ತಾಂತ್ರಿಕ ಸಿಬ್ಬಂದಿಯನ್ನು ಒದಗಿಸಿರುವುದು.

೨ ಗಿರಿಜನ ವಿಸ್ತರಣಾ ಕೇಂದ್ರಗಳ ಮೂಲಕ ಗಿರಿಜನರಿಗೆ ರೇಷ್ಮೆ ಕೃಷಿ ಉದ್ಯಮದಲ್ಲಿ ತೊಡಗಲು ಸೌಲಭ್ಯಗಳನ್ನು ಒದಗಿಸಿಕೊಡುವ ಕಾರ್ಯಕ್ರಮ.

೩ ವಿಶೇಷ ಘಟಕ ಯೋಜನೆಯಲ್ಲಿ ಪರಿಶಿಷ್ಟ ಜನಾಂಗದವರಿಗೆ ರೇಷ್ಮೆ ಕೃಷಿ ಉದ್ಯಮದಲ್ಲಿ ತೊಡಗಲು ಬೇಕಾದ ಸೌಲಭ್ಯಗಳನ್ನು ಕೊಡುವ ಕಾರ್ಯಕ್ರಮ.

೪ ಪಶ್ಚಿಮಘಟ್ಟ ಯೋಜನೆಯ ಪರಿಮಿತಿಯಲ್ಲಿ ರೇಷ್ಮೆ ಬೇಗಾರರಿಗೆ ಸೌಲಭ್ಯಗಳನ್ನು ಒದಗಿಸುವುದು.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಸಚಿವರು ತೃಪ್ತಿಕರವಾಗಿ ಕಾರ್ಯನಿರ್ವಹಣೆಯಾಗಿದೆ ಎಂದು ನನ್ನ (ಅ) ಪ್ರಶ್ನೆಗೆ ಉತ್ತರಿಸುತ್ತಾ ಹೇಳಿದ್ದಾರೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾರ್ಕೆಟ್‌ನ ತೊಡಕಿದೆಯೆಂದೂ ಆದರಿಂದ ರೇಷ್ಮೆ ವ್ಯವಸಾಯ ಕುಂಠಿತವಾಗಿದೆ ಎನ್ನುವ ಅನೇಕರ ದೂರು ಇದೆ; ಅದರ ಬಗ್ಗೆ ಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀ ಎ. ಲಕ್ಷ್ಮಿಸಾಗರ್.—ಏನಾದರೂ ತೊಡಕಿದ್ದರೆ ಅದನ್ನು ಸರಿಪಡಿಸುತ್ತೇವೆ.

ಶ್ರೀ ಬಿ. ಎಂ. ಇದಿನಬ್ಬ – ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಅನುಕೂಲ ಮಾಡಿದ್ದೇವೆಂದು ಹೇಳಿದ್ದೀರಿ : ಇಷ್ಟರವರೆಗೆ ಎಷ್ಟು ಜನರಿಗೆ ಅನುಕೂಲ ಮಾಡಿಕೊಟ್ಟಿದ್ದೀರಿ ?

ಶ್ರೀ ಎ. ಲಕ್ಷ್ಮಿಸಾಗರ್.—ಅದರ ಲೆಕ್ಕವಿದೆ. ಅವರಿಗೆ ಯಾವುದೇ ರೀತಿಯ ಕುಂದು ಕೊರತೆ ಇಲ್ಲದ ರೀತಿಯಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿ ಆ ಗ್ರೂಪಿನವರೆಗೆ ಪ್ರತ್ಯೇಕವಾಗಿ ವಿಶೇಷವಾಗಿ ಸಹಾಯ ಮಾಡತಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡುವುದಕ್ಕೆ ನಿರ್ದೇಶನ ಕೊಡುತ್ತೇನೆ.

ಮೈಸೂರು ಸುತ್ತಮುತ್ತ ಹಳ್ಳಿಗಳಲ್ಲಿ ಭೂಸ್ವಾಧೀನದ ಬಗ್ಗೆ

೧೩೭೬. ಶ್ರೀ ಪಿ. ಎಂ.ಚಿಕ್ಕಬೋರಯ್ಯ(ಚಾಮರಾಜ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ನಗರಕ್ಕೆ ಸೇರಿರುವ ಅನೇಕ ಹಳ್ಳಿಗಳಲ್ಲಿ ಕೃಷಿಯನ್ನು ಪ್ರಧಾನ ಕಸಬನ್ನಾಗಿ ಇಟ್ಟುಕೊಂಡಿದ್ದವರ ಜಮೀನುಗಳ ಪೈಕಿ ನಗರ ಬಡಾವಣೆಗಾಗಿ ಹಾಗೂ ಕೈಗಾರಿಕೆಗಳ ಸ್ಥಾಪನೆಗಾಗಿ ಭೂಸ್ವಾಧೀನ ಕಾಯಿದೆ ಪ್ರಕಾರ ಸ್ವಾಧೀನಪಡಿಸಿಕೊಂಡಿರುವ ಜಮೀನಿನ ವಿಸ್ತೀರ್ಣವೆಷ್ಟು ;

ಆ) ಬೇಸಾಯದ ಭೂಮಿಯನ್ನು ಕಳೆದುಕೊಂಡಿರುವ ರೈತನಿಂದ ಪಡೆದುಕೊಂಡು ಆತನ ಕುಟುಂಬಕ್ಕೆದ್ದ ಏಕ ಉತ್ಪತ್ತಿಯ ಮಾರ್ಗವನ್ನು ಅಳಿಸಿದ್ದರಿಂದ ಆ ಕುಟುಂಬಕ್ಕೆ ಬೇರೆ ಉತ್ಪತ್ತಿ ಮಾರ್ಗ ಕಾಣದೆ ನಿರ್ಗತಿಕವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಇ) ಅಂತಹ ಕುಟುಂಬಗಳ ಜೀವನಕ್ಕೆ ಸರ್ಕಾರದವರು ಇದುವರೆವಿಗೂ ಯಾವ ಏರ್ಪಾಡನ್ನು ಮಾಡದಿರಲು ಕಾರಣಗಳೇನು !

ಈ) ಅಂತಹ ಕುಟುಂಬಗಳ ಪುನರ್ವಸತಿಗಾಗಿ ಸರ್ಕಾರಿ ಕಛೇರಿಗಳಲ್ಲಿ ಹಾಗೂ ಸರ್ಕಾರಿ ಸಂಸ್ಥೆಗಳಲ್ಲಿ ಕೆಲಸಗಳನ್ನು ಕಾದಿರಿಸಿ ಒದಗಿಸಲಾಗುವುದೆ ?

ಶ್ರೀ ಜೆ. ಹೆಚ್. ಪಟೇಲ್(ಕೈಗಾರಿಕಾ ವಿದ್ಯುಚ್ಛಕ್ತಿ ಸಚಿವರು).—

ಅ) ೧ ಕೈಗಾರಿಕಾ ಉದ್ದೇಶಕ್ಕಾಗಿ ೩೫೦ ಎಕರೆ ಜಮೀನು ;

೩) ೩೪೩ ಎಕರೆ ಜಮೀನನ್ನು ಸಿ. ಐ. ಟಿ. ಬಿ., ಮೈಸೂರು ವಶಪಡಿಸಿಕೊಂಡಿದೆ.

ಆ) ಇಂತಹ ಯಾವುದೇ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

೫) ಉದ್ಭವಿಸುವುದಿಲ್ಲ.

ಈ) ಸರ್ಕಾರಿ ಕಛೇರಿಗಳಲ್ಲಿ ಕೆಲಸವನ್ನು ಕಾದಿರಿಸುವುದು ಸಾಧ್ಯವಾಗುವುದಿಲ್ಲ, ಆದಾಗ್ಯೂ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಲಿಯು ರೈತರಿಗೆ ಪರಿಹಾರ ನೀಡುವುದರ ಜೊತೆಗೆ ಅವರವರ ಜಮೀನುಗಳಲ್ಲಿ ಸ್ಥಾಪಿಸಲ್ಪಡುವ ಉದ್ದಿಮೆಗಳು ಭೂಮಿಯಂನ್ನು ಕಳೆದುಕೊಂಡಿರುವ ರೈತರಿಗೆ ಅಥವಾ ಅವರ ಸಂಬಂಧಿಕರಿಗೆ ಉದ್ಯೋಗಗಳನ್ನು ಕೊಡಬೇಕೆಂಬ ಷರತ್ತನ್ನು ಮಂಡಲಿಯು ನೆರವೇರಿಸುವ ಗುತ್ತಿಗೆ ಕರಾರು ಪತ್ರದಲ್ಲಿ ನಮೂದಿಸಿದೆ. ನಗರ ಬಡಾವಣೆಗಾಗಿ ಭೂಮಿಯನ್ನು ವಶಪಡಿಸಿಕೊಂಡ ಸಂದರ್ಭಗಳಲ್ಲಿ ರಿಯಾಯಿತಿ ದರದಲ್ಲಿ ನಿವೇಶನವನ್ನು ಮಂಜೂರು ಮಾಡಲಾಗುತ್ತದೆ.

ಶ್ರೀ ಪಿ.ಎಂ ಚಿಕ್ಕಜೋರಯ್ಯ.—ಮಾನ್ಯ ಅಧ್ಯಕ್ಷರೆ, ೩೫೦ ಎಕರೆ ಜಮೀನನ್ನು ಕೈಗಾರಿಕಾ ಉದ್ದೇಶಕ್ಕಾಗಿ ಅಕ್ವೈರ್ ಮಾಡಿಕೊಂಡಿದ್ದೀವೆ ಎಂದು ಹೇಳಿದ್ದಾರೆ. ಇದರ ಪೈಕಿ ಕಾರ್ಖಾನೆಗೆ ಎಷ್ಟು ಉಪಯೋಗಿಸಿದ್ದಾರೆ? ಹಾಗೂ ಕಾರ್ಮಿಕರಿಗೆ ನಿವೇಶನ ಕೊಡಲಿಕ್ಕೆ ಎಷ್ಟು ಪ್ರದೇಶವನ್ನು ಉಪಯೋಗಿಸಿದ್ದಾರೆ ಎಂದು ದಯವಿಟ್ಟು ಮಾನ್ಯ ಮಂತ್ರಿಗಳು ಹೇಳಬೇಕು. ಇದರ ಜೊತೆಗೆ ಜಮೀನನ್ನು ಕಳೆದುಕೊಂಡವರಿಗೆ ಪುನರ್ವಸತಿಗೆ ಏನಾದರೂ ಯೋಜನೆ ಹಾಕಿಕೊಂಡಿದ್ದೀರಾ? 'ಈ' ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ 'ಅವರವರ ಜಮೀನುಗಳಲ್ಲಿ ಸ್ಥಾಪಿಸಲ್ಪಡುವ ಉದ್ದಿಮೆಗಳು ಭೂಮಿಯನ್ನು ಕಳೆದುಕೊಂಡಿರುವ ರೈತರಿಗೆ ಅಥವಾ ಅದರ ಸಂಬಂಧಿಕರಿಗೆ ಉದ್ಯೋಗಗಳನ್ನು ಕೊಡಬೇಕೆಂಬ ಷರತ್ತನ್ನು ಮಂಡಲಿಯು ನೆರವೇರಿಸುವ ಗುತ್ತಿಗೆ ಕರಾರುಪತ್ರದಲ್ಲಿ ನಮೂದಿಸಿದೆ' ಎಂದಿದ್ದು ಅದರ ಪ್ರಕಾರ ಕೊಡಲಿಕ್ಕೆ ಏರ್ಪಾಡು ಮಾಡಿದೆ ಎಂದು ಹೇಳಿದ್ದಾರೆ. ಇಲ್ಲಿಯವರೆಗೆ ಯಾರಿಗಾದರೂ ಈ ರೀತಿ ಕೆಲಸ ಕೊಟ್ಟಿದ್ದಾರೆಯೇ ಎಂದು ಅಂಕಿಅಂಶಗಳು ಇದ್ದ ಪಕ್ಷದಲ್ಲಿ ಮಾನ್ಯಮಂತ್ರಿಗಳು ಹೇಳಬೇಕೆಂದು ಕೋರುತ್ತೇನೆ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಇದಕ್ಕೆ ಪ್ರತ್ಯೇಕವಾದ ಅಂಕಿಅಂಶಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ವಿವಿಧ ಕಾರ್ಖಾನೆಗಳು ಬಂದಿರುವುದರಿಂದ, ಈ ವಿವಿಧ ಕಾರ್ಖಾನೆಗಳಲ್ಲಿ ಯಾರ್ಯಾರು ಸಂಬಂಧಿಕರ ಕುಟುಂಬದವರಿಗೆ ಕೆಲಸ ಕೊಟ್ಟಿದ್ದಾರೆ ಎನ್ನುವುದು ಹೇಳುವುದು ಕಷ್ಟ. ಈ ಸಂದರ್ಭದಲ್ಲಿ ಒಂದೇ ಒಂದು ಮಾತನ್ನು ಹೇಳಲು ಬಯಸುತ್ತೇನೆ. ಮುಂದೆ ಯಾವುದೇ ಕಾರ್ಖಾನೆ ಆ ಸ್ಥಳದಲ್ಲಿ ಬಂದಾಗ ಯಾರು ಭೂಮಿಯನ್ನು ಕಳೆದು ಕೊಂಡಿರುತ್ತಾರೆ, ಆ ಕುಟುಂಬ ವರ್ಗದವರಿಗೆ ಉದ್ಯೋಗ ಕೊಡುವ ಅವಕಾಶವನ್ನು ಕಲ್ಪಿಸಿ ಕೊಡುವ ಕರಾರನ್ನು ಮಾಡುತ್ತೇವೆ. ಎರಡನೆಯದಾಗಿ ಮಾನ್ಯ ಸದಸ್ಯರು ೩೫೦ ಎಕರೆಯಲ್ಲಿ ಎಷ್ಟು ಕಾರ್ಖಾನೆಗಳನ್ನು ಕೊಟ್ಟಿದ್ದಾರೆ ಎಂದು ಕೇಳಿದ್ದಾರೆ. ಆದರ ಅಂದಾಜು ನನ್ನ ಹತ್ತಿರ ಇಲ್ಲ. ಕಾರ್ಮಿಕರ ವಸತಿಗಾಗಿ ಎಷ್ಟು ಜಮೀನು ಕೊಟ್ಟಿದ್ದಾರೆ. ಎಂದು ಕೇಳಿದ್ದಾರೆ. ಒಂದೊಂದು ಕಾರ್ಖಾನೆಗೆ ಇಷ್ಟು ಜಮೀನು ಎಂದು ಅಲಾಟ್ ಮಾಡಿ ಕೊಡುತ್ತೇವೆ. ಆದರ ಪ್ರಕಾರ ಕಾರ್ಖಾನೆಗೆ ಉಪಯೋಗಿಸುತ್ತಾರೆ. ಆದ್ದರಿಂದ ಇದರ ವಿವರ ಕೊಡುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ.

ಶ್ರೀ ಪಿ.ಎಂ, ಚಿಕ್ಕಜೋರಯ್ಯ.—ಮಾನ್ಯ ಅಧ್ಯಕ್ಷರೇ, ಕಾರ್ಖಾನೆಗೆ ಕೊಟ್ಟು ಉಳಿದಿರುವ ಜಮೀನಿನಲ್ಲಿ ಕಾರ್ಮಿಕರ ವಸತಿಗಾಗಿ ವಿನಿಯೋಗಿಸುತ್ತೇವೆ ಎಂದು ಹೇಳಿದ್ದಾರೆ. ಆದರೆ ಇಲ್ಲಿಯವರೆಗೆ ಕಾರ್ಮಿಕರ ವಸತಿಗಾಗಿ ಯಾವ ಪ್ರದೇಶವನ್ನೂ ಈ ೩೫೦ ಎಕರೆಯಲ್ಲಿ ಉಪಯೋಗಿಸಿಲ್ಲ. ಇದಕ್ಕೆ ದಯವಿಟ್ಟು ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು ಎರಡನೆಯದಾಗಿ ಇಲ್ಲಿಯವರೆಗೆ ಜಮೀನು ಕಳೆದುಕೊಂಡವರಿಗೆ ಯಾರಿಗಾದರೂ ಕೆಲಸ ಕೊಟ್ಟಿದ್ದಾರೆಯೇ, ಅವರ ಕುಟುಂಬವರ್ಗದವರಿಗೆ ಕೆಲಸ ಕೊಟ್ಟಿದ್ದ ಪಕ್ಷದಲ್ಲಿ ಇದು ಎಷ್ಟು ಜನಕ್ಕೆ ಸಂದಿದೆ ಎಂದು ದಯವಿಟ್ಟು ಹೇಳಬೇಕು ?

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಹೇಳಿದ್ದೇನೆ. ಈ ಬಗ್ಗೆ ವಿವರ ಇಲ್ಲ. ಒಂದುಸಾರಿ ಜಮೀನನ್ನು ವಶಪಡಿಸಿಕೊಂಡಮೇಲೆ ಬೇರೆ ಬೇರೆ ಇಲಾಖೆಗಳಿಂದ ನಮಗೆ ಕೊಡುತ್ತಾರೆ. ನಾವು ಏನು ಮಾಡುತ್ತೇವೆ ಎಂದರೆ ಒಂದೇ ದಿಕ್ಕಿಗೆ ಸೇರಿದಲ್ಲಿ ಅವುಗಳನ್ನು ಒಂದೊಂದು ಪ್ಲಾಟ್ ಅಂತ ಮಾಡಿ ಕೊಟ್ಟುಬಿಡುತ್ತೇವೆ. ಆದ್ದರಿಂದ ಇಂತಹ ಕುಟುಂಬದವರಿಗೆ ಕೆಲಸ ಕೊಟ್ಟಿದ್ದಾರೆಯೇ ಎಂದು ವಿವರಣೆ ಕೊಡಬೇಕಾದರೆ ಕಷ್ಟವಾಗುತ್ತದೆ. ಇದು ಸಾಧ್ಯವಾಗದ ಕೆಲಸವೆಂದು ಹೇಳಬಯಸುತ್ತೇನೆ. ಇನ್ನೊಂದು ಪ್ರಶ್ನೆ ಏನು ಕೇಳಿದ್ದಾರೆ ಎಂದರೆ. ಕಾರ್ಮಿಕರಿಗೆ ಮನೆ ಟ್ಟಿಕೊಟ್ಟಿಲ್ಲವೆಂದು ಈ ಬಗ್ಗೆ ಮಾನ್ಯ ಸದಸ್ಯರ ಗಮನಕ್ಕೆ ತರುವುದೇನೆಂದರೆ ಎಲ್ಲಿ ಮನೆಕಟ್ಟಿಲ್ಲವೆಂದು

ನಮ್ಮ ಗಮನಕ್ಕೆ ತರುತ್ತಾರೆ. ಅಂತಹ ಕಾರ್ಖಾನೆಗಳ ಕಾರ್ಮಿಕರ ಬೇಡಿಕೆಯಾಗಿದ್ದ ಪಕ್ಷದಲ್ಲಿ ಸಂಬಂಧ ಪಟ್ಟವರಿಗೆ ಸೂಚನೆ ಕೊಡಂತ್ತೇವೆಂದು ಹೇಳುತ್ತೇನೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷರ ಪೀಠದಲ್ಲಿದ್ದರು)

ಮೈಸೂರು ಜಿಲ್ಲೆಯ ಸರ್ಕಾರಿ ಸ್ವಾಮ್ಯಗಳ ಬಗ್ಗೆ

೧೬೧೬. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಮತ್ತು ರೇಷ್ಮೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ಜಿಲ್ಲೆಯಲ್ಲಿ ಸರ್ಕಾರಿ ಸ್ವಾಮ್ಯದಲ್ಲಿರುವ ಸಿಲ್ಕ್ ಕಾರ್ಖಾನೆಗಳೆಷ್ಟು ?

ಆ) ಕಳೆದ ೩ ವರ್ಷಗಳಲ್ಲಿ ಈ ಕಾರ್ಖಾನೆಗಳು ಮಾಡಿರುವ ಲಾಭ ಮತ್ತು ನಷ್ಟಗಳೆಷ್ಟು ? (ಕಾರ್ಖಾನೆವಾರು ವಿವರ ನೀಡುವುದು).

ಇ) ಆ ಪೈಕಿ ನಷ್ಟಕ್ಕೊಳಗಾಗಿರುವ ಕಾರ್ಖಾನೆಗಳು ನಷ್ಟ ಹೊಂದಲು ಪ್ರಮುಖ ಕಾರಣ ಗಳಾವುವು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ವ್ಯವಹಾರ ಮತ್ತು ರೇಷ್ಮೆ ಸಚಿವರು).—

ಅ) ಮೈಸೂರು ಜಿಲ್ಲೆಯಲ್ಲಿ ಸರ್ಕಾರಿ ಸ್ವಾಮ್ಯದಲ್ಲಿ ಏಳು ರೇಷ್ಮೆ ಕಾರ್ಖಾನೆಗಳಿವೆ.

ಆ) ಕಳೆದ ಮೂರು ವರ್ಷಗಳಲ್ಲಿ ಈ ಕಾರ್ಖಾನೆಗಳು ಮಾಡಿರುವ ಲಾಭ ಮತ್ತು ನಷ್ಟದ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ.

ಕ್ರಮ ಸಂಖ್ಯೆ	ಕಾರ್ಖಾನೆಯ ಹೆಸರು	ಲಾಭ (+) ಅಥವಾ ನಷ್ಟ (—) (ಲಕ್ಷ ರೂಗಳಲ್ಲಿ)		
		೧೯೮೫–೮೬	೧೯೮೬–೮೭	೧೯೮೭–೮೮
೧	ಸರ್ಕಾರಿ ರೇಷ್ಮೆ ಕಾರ್ಖಾನೆ ಕೊಳ್ಳೇಗಾಲ	(—)೬೩.೬೭	(—)೫೯.೩೨	(—)೪೮.೩೦
೨	ಸರ್ಕಾರಿ ರೇಷ್ಮೆ ಕಾರ್ಖಾನೆ ಮಾಂಬಳ್ಳಿ	(—)೧೮.೮೧	(—)೨೦.೯೮	(—)೧೭.೨೫
೩	ಸರ್ಕಾರಿ ರೇಷೆ ಕಾರ್ಖಾನೆ ಸಂತೇಮಾರಹಳ್ಳಿ	(—)೩೫.೬೦	(—)೩೩.೯೨	(—)೩೧.೫೭
೪	ಸರ್ಕಾರಿ ರೇಷ್ಮೆ ಕಾರ್ಖಾನೆ ಚಾಮರಾಜನಗರ	(—)೨೯.೫೦	(—)೧೯.೨೪	(—)೨೩.೩೫
೫	ಸರ್ಕಾರಿ ರೇಷ್ಮೆ ಹುರಿ ಮತ್ತು ನೇಯ್ಗೆ ಕಾರ್ಖಾನೆ ವಾಡಿಗುಂಡಂ	(—)೧೩.೯೩	(—) ೫.೧೨	(—)೧೭.೪೫
೬	ರೇಷ್ಮೆ ಕಾರ್ಖಾನೆ ಟಿ. ನರಸೀಪುರ	(—)೮೭.೫೧	(—)೯೭.೪೯	(—)೧೦೫.೫೦
೭	ರೇಷ್ಮೆ ನೇಯ್ಗೆ ಕಾರ್ಖಾನೆ, ಮೈಸೂರು	(+)೧೭.೮೪	(—)೩೦.೯೭	(—)೬೧.೨೭